ಓ ಎಸ್ ನಂ.53/2023

ಡಿ.ಡಬ್ಲ್ಯೂ-2 ಪರಮೇಶ್ವರ ತಂದೆ ಸಾತಲಿಂಗಪ್ಪ ವಾಘ್ದರ್ಗಿ

**(ಇಂದು ದಿನಾಂಕಃ 20-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಎಸ್ ಎಸ್ ಪಿ ವಕೀಲರಿಂದ.

ನನ್ನ ಅಜ್ಜನ ಹೆಸರು ದೇವರಾವ್ ಆಗಿರುತ್ತದೆ. ನನ್ನ ಅಜ್ಜನಿಗೆ ೮ ಜನ ಗಂಡು ಮಕ್ಕಳು ಮತ್ತು ೩ ಜನ ಹೆಣ್ಣುಮಕ್ಕಳು ಇರುತ್ತಾರೆ. ನನ್ನ ಅಜ್ಜ ಯಾವ ವರ್ಷದಲ್ಲಿ ಮೃತರಾಗಿರುತ್ತಾರೆ ಎಂದು ನನಗೆ ನೆನಪಿಲ್ಲ. ನನ್ನ ತಾತ ಜೀವಿತಾ ಇರುವಾಗಲೆ ತಮ್ಮ ಮಕ್ಕಳಿಗೆ ಪಾಲು ಮಾಡಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಾತನಿಗೆ ಸುಮಾರು ೩೪೦ ಎಕರೆ ಜಮೀನು ಇತ್ತು. ಯಾರ ಯಾರ ಪಾಲಿಗೆ ಎಷ್ಟು ಜಮೀನು ಬಂದಿವೆ ಎಂದು ನನಗೆ ಹೇಳಲು ಗೊತ್ತಿಲ್ಲ.

೨. ಸರ್ವೆ ನಂಬರ ೧೧೭/೫ ರಲ್ಲಿ ನನ್ನ ಹೆಸರಿನಿಂದ ೪ ಎಕರೆ ಚಿಲ್ಲರೆ ಗುಂಟೆ ಮತ್ತು ವಾದಿ ರಮೇಶರವರ ಹೆಸರಿನಲ್ಲಿ ೪ ಎಕರೆ ೩೨ ಗುಂಟೆ ಜಮೀನು ಮತ್ತು ೩ನೇ ಪ್ರತಿವಾದಿ ಸತೀಶ ಸಾತಲಿಂಗಪ್ಪ ವಾಘ್ದರ್ಗಿರವರ ಹೆಸರಿನಲ್ಲಿ ೫ ಎಕರೆ ೨ ಗುಂಟೆ ಜಮೀನು ಇರುತ್ತವೆ. ಸರ್ವೆ ನಂಬರ ೩೧/೧ ರಲ್ಲಿ ೪ನೇ ಪ್ರತಿವಾದಿ ಸುರೇಶರವರ ಹೆಸರಿನಲ್ಲಿ ೪ ಎಕರೆ ೧೪ ಗುಂಟೆ ಜಮೀನು ಮತ್ತು ೬ನೇ ಪ್ರತಿವಾದಿ ರವೀಂದ್ರನ ಹೆಸರಿನಲ್ಲಿ ೪ ಎಕರೆ ೩೦ ಗುಂಟೆ ಜಮೀನು ಇರುತ್ತವೆ. ಸರ್ವೆ ನಂಬರ ೨೪/೧ ರಲ್ಲಿ ನಮ್ಮ ತಂದೆಯಾದ ೧ನೇ ಪ್ರತಿವಾದಿ ಸಾತಲಿಂಗಪ್ಪರವರ ಹೆಸರಿನಲ್ಲಿ ೩ ಎಕರೆ ೧೦ ಗುಂಟೆ ಜಮೀನು ಇರುತ್ತದೆ. ಮನೆ ನಂಬರ ೭ ಕೂಡಾ ನಮ್ಮ ತಂದೆಯಾದ ೧ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ.

೩. ನಾನು ಸರಕಾರಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಯನಾಗಿ ಕೆಲಸ ಮಾಡುತ್ತೇನೆ. ನಾನು ಕಲಬುರಗಿಯಲ್ಲಿ ವಾಸವಿರುತ್ತೇನೆ. ನಾನು ಕಲಬುರಗಿಯ ಬಾಡಿಗೆ ಮನೆಯಲ್ಲಿ ವಾಸವಿರುತ್ತೇನೆ. ನಾನು ಸುಮಾರು ೨೫ ವರ್ಷಗಳಿಂದ ಕಲಬುರಗಿಯ ನಿವಾಸಿಯಾಗಿರುತ್ತೇನೆ. ವಾದಿ ರಮೇಶ ಮೊದಲು ಹುಬ್ಬಳ್ಳಿಯಲ್ಲಿ ಇದ್ದರು, ಈಗ ಕಲಬುರಗಿಯಲ್ಲಿ ವಾಸವಿರುತ್ತಾರೆ. ನನ್ನ ಉಳಿದ ಅಣ್ಣ-ತಮ್ಮಂದಿರೂ ಕೂಡಾ ಬೇರೆ-ಬೇರೆ ಮನೆಗಳಲ್ಲಿ ವಾಸವಿರುತ್ತಾರೆ ಎಂದರೆ ಸರಿ. ನನ್ನ ತಂದೆ ಈಗ ೧ನೇ ಪ್ರತಿವಾದಿ ರವೀಂದ್ರರವರ ಹತ್ತಿರ ವಾಸವಿರುತ್ತಾರೆ ಎಂದರೆ ಸಾಕ್ಷಿಯು ಎಲ್ಲರ ಹತ್ತಿರವೂ ಇರುತ್ತಾರೆ ಎನ್ನುತ್ತಾರೆ. ೧೯೮೨ ರಲ್ಲಿ ನಾನು ಮೇಲೆ ಹೇಳಿದಂತೆ ನನ್ನ ಹೆಸರಿನಲ್ಲಿ ಮತ್ತು ನನ್ನ ಸಹೋದರರು ಮತ್ತು ನಮ್ಮ ತಂದೆಯ ಹೆಸರಿನಲ್ಲಿ ಜಮೀನುಗಳಾಗಿರುತ್ತವೆ. ನನ್ನ ತಮ್ಮನಾದ ವಾದಿ ರಮೇಶರವರು ತಮ್ಮ ಹೆಸರಿನಲ್ಲಿದ್ದ ಜಮೀನನ್ನು ಅಡಮಾನ ಮಾಡಿರುತ್ತಾರೆ ಎಂದರೆ ಸರಿ.

೪. ನಮ್ಮ ತಾತ ಇರುವಾಗಲೆ ನಮ್ಮ ತಂದೆ ನಮಗೆ ಜಮೀನು ಹಂಚಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಆಗ ನಾವು ಚಿಕ್ಕವರಿದ್ದೇವು ಎನ್ನುತ್ತಾರೆ. ನಾವು ನಮ್ಮ ಹೆಸರಿನಲ್ಲಿ ಪಹಣಿಗಳಿರುವಂತೆ ಜಮೀನಿನ ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ನಡುವೆ ಪಾಲು ಆಗಿಲ್ಲ ಎನ್ನುತ್ತಾರೆ. ಜಮೀನಿನ ಸಾಗುವಳಿಯನ್ನು ನಮ್ಮ ತಂದೆ ಆಳುಗಳನ್ನು ಹಚ್ಚಿ ಮಾಡಿಸುತ್ತಾರೆ. ದಾವಾ ಜಮೀನುಗಳಲ್ಲಿ ಯಾವ ಜಮೀನಿನಲ್ಲಿ ಯಾವ ಬೆಳೆ ಬೆಳೆದಿರುತ್ತಾರೆ ಎಂದು ನನಗೆ ಈಗಿನದು ಹೇಳಲು ಗೊತ್ತಿಲ್ಲ. ಸಾಕ್ಷಿಯು ಸಾಮಾನ್ಯವಾಗಿ ತೊಗರಿ, ಉದ್ದು, ಸೂರ್ಯಪಾನ ಮತ್ತು ಜೋಳ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ ಎನ್ನುತ್ತಾರೆ. ನಮ್ಮ ತಂದೆ ಬಂದ ಬೆಳೆಯಲ್ಲಿ ನಮಗೆ ಎಲ್ಲರಿಗೂ ಸಮಪಾಲು ಮಾಡಿ ಕೊಡುತ್ತಾರೆ.

೫. ಜಮೀನಿನಲ್ಲಿ ಬಂದ ಬೆಳೆಯನ್ನು ನಮ್ಮ ತಂದೆಯವರೆ ಅಡತ್ ಅಂಗಡಿಗೆ ಮಾರಾಟ ಮಾಡುತ್ತಾರೆ. ನನ್ನ ಪ್ರತಿವಾದ ಪತ್ರದಲ್ಲಿ ಸದರಿ ವಿಚಾರವನ್ನು ಬರೆಸಿರುವುದಿಲ್ಲ. ಪಹಣಿಯಂತೆ ನಾವು ಬೇರೆ-ಬೇರೆಯಾಗಿ ದಾವಾ ಜಮೀನುಗಳನ್ನು ಸಾಗುವಳಿ ಮಾಡುತ್ತೇವೆ ಎಂದರೆ ಸರಿಯಲ್ಲ. ನಮ್ಮ ತಂದೆಯಾದ ೧ನೇ ಪ್ರತಿವಾದಿ ಮತ್ತು ನನ್ನ ಸಹೋದರರಾದ ೩, ೪ ಮತ್ತು ೬ನೇ ಪ್ರತಿವಾದಿಗಳು ತಮ್ಮ ಪಾಲಿಗೆ ಬಂದ ಜಮೀನುಗಳನ್ನು ಫಲವತ್ತಾಗಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಫಲವತ್ತಾದ ಜಮೀನುಗಳನ್ನು ಹೊಡೆಯಬೇಕೆಂಬ ಉದ್ದೇಶದಿಂದ ನಾನು ನನ್ನ ತಮ್ಮನ ಕಡೆಯಿಂದ ಒಂದು ಸುಳ್ಳು ದಾವೆ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.